‘ಎಲ್ಲಿ ಆಯ್ತುದೆ ಈ ಹೊಂಡಗಳ್ನ ತಪ್ಪಿಸಿಕೊಂಡು ಜನಾನ ಹಿಂದಿಕ್ಕೋಕೆ? ಅಂದಹಾಗೆ ತಿಪ್ಪೇಸಿ, ಇಲ್ಲಿ ಒಂದು ಕರಾಮತ್ತೂ ಐತೆ ಗೊತ್ತಾ ನಿನಗೆ?’

‘ಅದ್ಯಂಥಾ ಕರಾಮತ್ತೋ ಮಾರಾಯ?’

‘ವಾಹನಗ್ಳ ಬಿಡಿ ಭಾಗ ತಯಾರ್ಸೋ ಇಂಡಸ್ಟ್ರೀಗಳು ಸಂಬಂಧಪಟ್ಟವರಿಗೆ ಆಗಾಗ ಒಂದಿಷ್ಟು ಕಾಣಿಕೆ ಕೊಡ್ತಾ ಇರಬೌದೂಂತ ನನ್ನ ಗುಮಾನಿ!’

‘ಅದದೆಂಗೇಳ್ತೀಯಾ?’

‘ಹೆಂಗೇಂದ್ರೆ, ಈಗ ನೋಡು ಈ ರಸ್ತೇಲಿ ಗಾಡಿ ಓಡ್ಸಿದ್ರೆ ಬೇಗ ಬೇಗ ಗಾಡಿಗಳ ಬಿಡಿ ಭಾಗಗಳೆಲ್ಲಾ ಎಕ್ಕುಟ್ಟೆ ಹೋಯ್ತುವೆ ಹೌದಾ?’

‘ಇಲ್ವಾ ಮಂತೆ?’

‘ಆಗ ಬಿಡಿ ಭಾಗಗಳನ್ನ ವಾಹನ ರಿಪೇರಿಯವ್ರು ಹೆಚ್ಚು ಹೆಚ್ಚು ಕೊಳ್ಳಬೇಕಾಯ್ತದೆ. ಇದ್ರಿಂದ ಬಿಡಿ ಭಾಗಗಳ ತಯಾರಕರಿಗೆ ಲಾಭ ಆಯ್ತದಲ್ವಾ? ಆ ಲಾಭದಲ್ಲಿ ಒಂದೀಟು ಸಂಬಂಧಪಟ್ಟವರಿಗೆ ಕೊಟ್ರಾತು. ಅವ್ರು ರಸ್ತೆಗಳ ಸುದ್ದಿಗೇ ಹೋಗ್ದೆ ಸುಮ್ಕಿರ್ತಾರೆ.’

‘ನೀ ಹೇಳೂದೂ ನಿಜಾನೇ ಇರಬೋದು ಅನ್ಸಿತ್ತೆ ನೋಡು. ಚುನಾವ್ಣೆ ಹತ್ರ ಬಂದಾಗ ಮಾತ್ರ ಅಲ್ಲಲ್ಲೇ ಒಂದೀಟು ತ್ಯಾಪೆ ಹಾಕಿದ ಸಾಸ್ತ್ರ ಮಾಡ್ತಾರೆ.’

‘ಅದ್ರೆ ರಸ್ತೆಗಳು ದುರಸ್ತಿ ಕಾಣಬೇಕಾದ್ರೆ ಚುನಾವಣೆ ಹತ್ರ ಬರ್ಬೇಕಾಯ್ತದೆ. ಅಂದರೆ ವರ್ಸಕ್ಕೆ ಒಂದು ಚುನಾವ್ಣೆ ಬಂದ್ರೆ ಚೆನ್ನಾಗಿರುತ್ತೆ ಅಂತ ನನಗನ್ನಿಸ್ತದೆ. ಇನ್ನೊಂದು ವಿಷ್ಯ ಏನೂಂದ್ರೆ ವಾಹನಗ್ಳು ಸ್ಪೀಡಾಗಿ ಹೋಗಿ ಆಕ್ಸಿಡೆಂಟ್ ಮಾಡ್ಕಳ್ದೆ ಇರಬೇಕೂಂದ್ರೆ ರಸ್ತೆಗಳ ಹೊಂಡ–ಹಂಪುಗಳನ್ನ ಅಂಗೇ ಬಿಡ್ಬೇಕು. ರಿಪೇರಿ ಮಾಡ್ನೇ ಬ್ಯಾಡ್ದು. ಚೆನ್ನಾಗಿರೋ ರಸ್ತೇಲೂ ಗುಂಡಿಗಳ್ನ ತೋಡ್ಬೇಕು!’

ನನ್ನ–ತಿಪ್ಪೇಶಿಯ ಈ ಐಡಿಯಾವನ್ನು ಸಂಬಂಧಪಟ್ಟವರು ಗಮನಿಸ್ತಾರೆ ಅಂದ್ಕೊಂಡಿದೀನಿ.


## ಜಿ.ವಿ. ಗಣೇಶಯ್ಯ

ಕೊಪ್ಪ ತಾಲ್ಲೂಕಿನ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ಗಣೇಶಯ್ಯ ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದಾರೆ. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಕೆಲಸ ಮಾಡಿ ನಿವೃತ್ತರು. 20ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.